ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 9 ಕರ್ನಾಟಕ [illegible]

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 12/12/20

# ಸಭಾಪತಿ ಪದಚ್ಯುತಿಗೆ ಮಂಗಳವಾರ ಕಲಾಪ

12/12

ಸಂ.ಕ.ಸಮಾಚಾರ, ಬೆಂಗಳೂರು

ಮೇಲ್ಮನೆ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ಸಲುವಾಗಿಯೇ ವಿಧಾನಪರಿಷತ್ತಿನ ವಿಶೇಷ ಅಧಿವೇಶನ ನಡೆಯುವುದು ಬಹುತೇಕ ಖಚಿತವಾಗಿದೆ.

ಹಾಲಿ ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ ಅವರ ಪದಚ್ಯುತಿಗೆ ಪಟ್ಟು ಹಿಡಿದಿರುವ ಸರ್ಕಾರ ಶುಕ್ರವಾರ ಈ ಸಂಬಂಧ ರಾಜಭವನದ ಮೆಟ್ಟಿಲು ಹತ್ತಿದ ಬೆನ್ನಿಗೇ ರಾಜ್ಯಪಾಲರ ಸೂಚನೆಯ ಮೇರೆಗೆ ಡಿ. 15ರಂದು ಪರಿಷತ್ತಿನ ವಿಶೇಷ ಅಧಿವೇಶನ ನಡೆಯುವುದು ನಿಶ್ಚಿತವಾಗಿದೆ.

ಈ ಸಂಬಂಧ ಸಂಸದೀಯ ವ್ಯವಹಾರಗಳ ಇಲಾಖೆಯ ಕಾರ್ಯ ದರ್ಶಿ ಅವರು ವಿಧಾನಪರಿಷತ್ತಿನ ಕಾರ್ಯದರ್ಶಿಗೆ ಪತ್ರ ಬರೆದಿದ್ದು ಪತ್ರದಲ್ಲಿ 'ಸಭಾಪತಿ

## ಮೇಲ್ಮನೆ ಅಧಿವೇಶನ

ವಿರುದ್ಧದ ಅವಿಶ್ವಾಸ ನಿರ್ಣಯ ಮಂಡನೆ ಮತ್ತು ಇತರೆ ಸರ್ಕಾರಿ ಕಲಾಪಗಳಿಗಾಗಿ' ಅಧಿವೇಶನ ಕರೆಯುವಂತೆ ಸ್ಪಷ್ಟವಾಗಿ ಸೂಚಿಸಲಾಗಿದೆ ಎಂದು ತಿಳಿದುಬಂದಿದೆ.

ಕಳೆದ ಅಧಿವೇಶನದಲ್ಲಿನ ಸಭಾಪತಿಗಳ ಸಂಸದೀಯ ನಡವಳಿಕೆ ಬಗ್ಗೆ ಅಸಮಾಧಾನಗೊಂಡಿರುವ ಬಿಜೆಪಿ ವಿಪಕ್ಷ ಜೆಡಿಎಸ್‌ನ ಸಹಕಾರದೊಂದಿಗೆ ಸಭಾಪತಿ ಪದಚ್ಯುತಿಗೆ ರಂಗವೇದಿಕೆ ಸಜ್ಜು ಮಾಡಿಕೊಂಡಿದ್ದು ಈಗಾಗಲೇ ಅವಿಶ್ವಾಸ ನಿರ್ಣಯ ಮಂಡನೆಗೆ ಅವಕಾಶ ಕೋರಿ ನೋಟಿಸ್ ನೀಡಿದೆ. ಬುಧವಾರವಷ್ಟೇ ಆ ಹದಿನಾಲ್ಕು ದಿನಗಳು ಪೂರ್ಣಗೊಂಡಿದ್ದರಿಂದ ಗುರುವಾರ ಅವಿಶ್ವಾಸ ನಿರ್ಣಯ ಮಂಡಿಸಿ ಚರ್ಚೆ ನಡೆಸುವ ಉಮೇದಿನಲ್ಲಿ ಬಿಜೆಪಿ ಇತ್ತಾದರೂ ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ ಅವರು ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ್ದರು.

ಈ ಅನಿರೀಕ್ಷಿತ ಬೆಳವಣಿಗೆಯ ಹಿನ್ನೆಲೆಯಲ್ಲಿ ಶುಕ್ರವಾರ ಬೆಳಗ್ಗೆ ಮೇಲ್ಮನೆ ಸಭಾನಾಯಕ ಕೋಟಾ ಶ್ರೀನಿವಾಸಪೂಜಾರಿ ನೇತೃತ್ವದ ನಿಯೋಗ ರಾಜಭವನಕ್ಕೆ ತೆರಳಿ ಕಲಾಪ ಸಲಹಾ ಸಮಿತಿಯ ಸಭೆಯಲ್ಲಿ ಕಲಾಪವನ್ನು ಅನಿರ್ದಿಷ್ಟಾವಧಿವರೆಗೆ ಮುಂದೂಡುವ ಯಾವುದೇ ಸೂಚನೆ ನೀಡದೇ ಏಕಾಏಕಿ ಮುಂದೂಡಿದ ಸಭಾಪತಿಗಳ ಕ್ರಮದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ತಕ್ಷಣವೇ ಮೇಲ್ಮನೆ ಅಧಿವೇಶನ ಕರೆಯುವಂತೆ ಸಭಾಪತಿಗಳಿಗೆ ಸೂಚನೆ ನೀಡಲು ರಾಜ್ಯಪಾಲರಿಗೆ ಮನವಿ ಮಾಡಿತ್ತು.

ಈ ಮನವಿ ಮೇರೆಗೆ ರಾಜ್ಯಪಾಲರ ಸೂಚನೆಯನ್ವಯ ಇದೀಗ ಸರ್ಕಾರ ಸಂಸದೀಯ ವ್ಯವಹಾರಗಳ ಇಲಾಖೆಯ ಮೂಲಕ ಪರಿಷತ್ ಕಾರ್ಯದರ್ಶಿಗಳಿಗೆ ಪತ್ರದ ಮುಖೇನ ಅಧಿವೇಶನ ಕರೆಯಲು ಸೂಚಿಸಿದೆ.

### ರಾಜ್ಯಪಾಲರಿಗೆ ಪತ್ರ

"ವಿಧಾನ ಸಭೆಯನ್ನು ಮಾತ್ರ ಮೊಟಕು ಮಾಡುವ ನಿರ್ಧಾರ ತೆಗೆದುಕೊಳ್ಳಲಾಗಿತ್ತು. ವಿಧಾನಪರಿಷತ್ತು ಮಂಗಳವಾರದವರೆಗೆ ನಡೆಯಬೇಕಾಗಿತ್ತು. ಆದರೆ, ದಿಢೀರ್ ಎಂದು ಮುಂದೂಡಿರುವುದರಿಂದ ರಾಜ್ಯಪಾಲರಿಗೆ ಮನವಿ ಮಾಡಲಾಗಿದೆ.

■ **ಬಿ.ಎಸ್. ಯಡಿಯೂರಪ್ಪ** | ಮುಖ್ಯಮಂತ್ರಿ

### ಶೀಘ್ರ ಅಧಿಸೂಚನೆ

"ಸರ್ಕಾರದ ಪತ್ರ ಬಂದಿರುವುದು ನಿಜ. ವಿಶೇಷ ಅಧಿವೇಶನ ಕರೆಯಲು ಸಭಾಪತಿಗಳಲ್ಲಿ ಅನುಮತಿ ಕೋರಲಾಗಿದೆ. ಅನುಮತಿ ದೊರೆಯುತ್ತಿದ್ದಂತೆ ಅಧಿಸೂಚನೆ ಹೊರಬೀಳಲಿದೆ.

■ **ಹಿರಿಯ ಅಧಿಕಾರಿ** | ವಿಧಾನಪರಿಷತ್ ಸಚಿವಾಲಯ